

# ಸಂಗೀತ ಬಾನಿನ ಲಾಲ್ಗುಡಿ ಬಾನಿ

ಲಾಲ್ಗುಡಿ ಗೋಪಾಲ ಅಯ್ಯರ್ ಜಯರಾಮನ್ ರಾಧಾಕೃಷ್ಣನ್, ಸಂಕ್ಷಿಪ್ತವಾಗಿ ಲಾಲ್ಗುಡಿ ಜಿಜೆಆರ್ ಕೃಷ್ಣನ್ ಕರ್ನಾಟಕ ಸಂಗೀತ ಪಿಟೀಲು ವಾದನದಲ್ಲಿ ವಿಶ್ವಮಟ್ಟದ ಖ್ಯಾತಿ ಪಡೆದವರು. ತಂಗಿ ಲಾಲ್ಗುಡಿ ವಿಜಯಲಕ್ಷ್ಮಿ ಜೊತೆಗೂಡಿ ಪಿಟೀಲು ಜೊತೆಗೆ ದೇಶ ವಿದೇಶಗಳಲ್ಲಿ ಕಛೇರಿ ನೀಡುತ್ತಲೇ ಇರುತ್ತಾರೆ.

ವಿಶ್ವವಿಖ್ಯಾತ ಪಿಟೀಲು ಕಲಾವಿದರಾಗಿದ್ದ ಪದ್ಮಭೂಷಣ ದಿ. ಲಾಲ್ಗುಡಿ ಜಯರಾಮನ್ ಅವರ ಮಕ್ಕಳಾದ ಈ ಇಬ್ಬರೂ ಕಲಾವಿದರು ತಂದೆಯ ಗರಡಿಯಲ್ಲೇ ಪಳಗಿದವರು. ಪಿಟೀಲು ವಾದನದಲ್ಲಿ ಹೆಸರು ಗಳಿಸಿ 'ಲಾಲ್ಗುಡಿ ಬಾನಿ' ಯನ್ನು ಜನಪ್ರಿಯಗೊಳಿಸಿದ 'ಗಟ್ಟಿಕುಳ'. ಪಿಟೀಲು ವಾದನದಲ್ಲಿ ಈ ಅಣ್ಣ–ತಂಗಿಯರದು ಐದನೇ ಪೀಳಿಗೆ. ನಾಲ್ಕು ದಶಕಗಳಿಂದ ಪಿಟೀಲು ನುಡಿಸಾಣಿಕೆಯಲ್ಲಿ ತೊಡಗಿಸಿಕೊಂಡವರು ಕೃಷ್ಣನ್. ಇಬ್ಬರೂ ಒಟ್ಟಾಗಿ ಪಿಟೀಲು ನುಡಿಸಲಾರಂಭಿಸಿ ಮೂವತ್ತು ವರ್ಷ ಮೇಲಾಗಿದೆ. ನುಡಿಸಾಣಿಕೆಯಲ್ಲಿ ಪಕ್ವತೆ, ರಾಗಗಳ ವಿದ್ವತ್ಪೂರ್ಣ ನಿರೂಪಣೆ, ತಾಳ ಲಯಗಳಲ್ಲಿ ಅಸಾಧಾರಣ ಹಿಡಿತ, ಆಕರ್ಷಕ ಮನೋಧರ್ಮ, ಸ್ವರಪ್ರಸ್ತಾರ, ನೆರವಲ್, ತನಿಯಾವರ್ತನಗಳಲ್ಲಿ ಅದ್ಭುತ ಕೈಚಳಕ... ಇವೆಲ್ಲವೂ ಇವರಿಬ್ಬರ ವಾದನ ವೈಶಿಷ್ಟ್ಯ.

ಅಮೆರಿಕದ ಆ್ಯಮ್‌ಸ್ಟರ್‌ಡ್ಯಾಮ್, ಡಲ್ಲಾಸ್, ನ್ಯೂಯಾರ್ಕ್, ಚೀನಾ, ಯೂರೋಪ್, ಸಿಂಗಪುರ, ಮಲೇಷ್ಯಾ ಮುಂತಾದ ದೇಶಗಳ ಹಲವು ಪ್ರತಿಷ್ಠಿತ ವೇದಿಕೆಗಳಲ್ಲಿ ನೂರಾರು ಯುಗಳ ಕಛೇರಿಗಳನ್ನು ನೀಡಿದ್ದರೂ ಈ ಪಿಟೀಲು ಜೋಡಿಗೆ ಬೆಂಗಳೂರು ಎಂದರೇ ಬಹಳ ಇಷ್ಟ.

'ಬೆಂಗಳೂರಿನ ಜೊತೆಗೆ ನಮಗೆ ಭಾವನಾತ್ಮಕ ಸಂಬಂಧ ಇದೆ ಎನ್ನುತ್ತಲೇ ಮಾತಿಗಾರಂಭಿಸಿದರು ವಿಜಯಲಕ್ಷ್ಮಿ. 'ಸಂಗೀತ ನಮ್ಮ ಜೀವನದ ಅವಿಭಾಜ್ಯ ಅಂಗ. ವೇದಿಕೆ ಮೇಲೆ ಹೋಗುವ ಮುನ್ನ ಏನು ನುಡಿಸಬೇಕು ಎನ್ನುವ ಬಗ್ಗೆ ಏನೂ ಪ್ಲಾನ್ ಮಾಡಲ್ಲ. ಸಭಾಂಗಣದಲ್ಲಿ ಕೇಳುಗರ ಅಭಿರುಚಿ ನೋಡಿಕೊಂಡು ರಾಗಗಳ ನುಡಿಸಾಣಿಕೆ ಬಗ್ಗೆ ನಿರ್ಧಾರ ಮಾಡ್ತೀವಿ. ಏಕೆಂದರೆ ನಾವು 'ಕಲ್ಯಾಣಿ' ರಾಗ ನುಡಿಸ್ಬೇಕು ಅಂತ ಹೋದರೆ ಅಲ್ಲಿ 'ತೋಡಿ ನುಡಿಸಿ' ಅಂತ ಕೇಳ್ತಾರೆ. ಆಗ ನಮ್ಮ ಯೋಜನೆ ಬದಲಾಯಿಸಬೇಕಾಗುತ್ತದೆ' ಎಂದರು.

ತಂಗಿಯ ಮಾತನ್ನು ಅನುಸರಿಸುತ್ತಾ, "ನ್ಯೂಯಾರ್ಕ್‌ನ ಲಿಂಕನ್ ಹಾಲ್, ಆಮ್‌ಸ್ಟರ್‌ಡ್ಯಾಮ್‌ನ ರಾಯಲ್ ಟ್ರಾಪಿಕಲ್ ಇನ್‌ಸ್ಟಿಟ್ಯೂಟ್, ಇಂಗ್ಲೆಂಡ್, ರಷ್ಯಾಗಳಲ್ಲಿ ನುಡಿಸುವಾಗ ಆಗಿದ್ದ ಅನುಭವಗಳೆಲ್ಲವೂ ಸ್ಮರಣೀಯ. ಒಮ್ಮೆ ಅಮೆರಿಕದ ಸ್ಯಾಂಡಿಯಾಗೊದ ಇಂಡಿಯನ್ ಫೈನ್ ಆರ್ಟ್ಸ್ ಸೊಸೈಟಿಯಲ್ಲಿ 2015ರಲ್ಲಿ ಯುಗಳ ಪಿಟೀಲು ನುಡಿಸುವಾಗ ಸಿತಾರ್ ಮಾಂತ್ರಿಕ ಪಂ. ರವಿಶಂಕರ್ ಅವರು ಬಂದಿದ್ದರು. ಕಛೇರಿ ಮುಗಿದ ಬಳಿಕ 'ಯು ಹ್ಯಾವ್ ಯುವರ್ ಫಾದರ್ಸ್ ಫಿಂಗರ್ಸ್. ಯುವರ್ ಮ್ಯೂಸಿಕ್ ಹ್ಯಾಸ್ ಟಚ್ಡ್ ಮೈ ಸೋಲ್' (**You have your father's fingers. your music has touched my soul**) ಎಂದಾಗ ನಮಗಿಬ್ಬರಿಗೂ ನಾವು ಪಿಟೀಲು ನುಡಿಸಿದ್ದು ಸಾರ್ಥಕ ಎನಿಸಿತ್ತು. ಈ ಅನುಭವ ನಮಗಿಬ್ಬರಿಗೆ ಇನ್ನಷ್ಟು ಅವಿಸ್ಮರಣೀಯ ಆಗಿದೆ" ಎಂದು ಪುಳಕಗೊಂಡರು ವಿದ್ವಾನ್ ಕೃಷ್ಣನ್.

ಒಂದೊಂದು ಕಛೇರಿಯೂ ಅನುಭವದ ಮೆಟ್ಟಿಲನ್ನು ಏರಿಸುತ್ತಾ ಹೋಗುತ್ತದೆ. ಈಗ